ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 30.11.2024.
**ಮುಂದುವರೆದ ಪಾಟೀ ಸವಾಲುಃ** ಅರ್ಜಿದಾರ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ಭೀಮರಾವ್ ಮತ್ತು ಆತನ ಮಕ್ಕಳು ಒಂದು ಹಂಚಿಕೆ ದಾವಾ ಒ.ಎಸ್.ನಂ.2/2010 ಹಾಕಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ನಾನು 5ನೇ ಎದುರುದಾರನಿಂದ ಮುಕ್ತಿಯಾರ ಪತ್ರ ಪಡೆದರೂ ಕೂಡಾ ಮೇಲೆ ಹೇಳಿದ ಕೇಸ್ ಹಾಕಿದ್ದು ನನಗೆ ಗೊತ್ತಿದೆ ಎಂದರೆ, ಸಾಕ್ಷಿ ಕೇಸ್ ಹಾಕಿದ್ದು ಗೊತ್ತಿದೆ ಆದರೆ ವಿವರಣೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕೇಸಿನಲ್ಲಿ 5ನೇ ಎದುರುದಾರ ತನ್ನನ್ನು ಪಾರ್ಟಿ ಮಾಡಿ ಅರ್ಜಿ ಸಲ್ಲಿಸಿದ್ದ ಎಂದರೆ ಸರಿ. ಸದರಿ ಅರ್ಜಿ ವಜಾ ಆಯಿತು ಎಂದರೆ ಸರಿ. ಮೇಲೆ ಹೇಳಿದ ಎರಡು ದಾವೆಗಳು ಹಾಕಿದ್ದು ಗೊತ್ತಿದ್ದು ಕೂಡಾ ನಾನು ಅನಧಿಕೃತವಾಗಿ ಕಟ್ಟಡ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಎರಡು ಕೇಸ್‌ಗಳನ್ನು ಹಾಕಿದ್ದರೂ ಕೂಡಾ ನಾನು ದುರುದ್ದೇಶದಿಂದ ಪೂರ್ವಕವಾಗಿ ಕ್ರಯಕ್ಕೆ ಹಿಡಿದ ಸ್ವತ್ತುನ್ನು ಎಸ್‌ಬಿಐ ಬ್ಯಾಂಕಿಗೆ ಅಡಮಾನ ಮಾಡಿ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-1ರ ಒ.ಎಸ್.ನಂ.2/2010 ಮತ್ತು ಒ.ಎಸ್.ನಂ.2/2014ರ ದಾವೆಗಳು ಡಿಕ್ರಿಯಾಗಿರುತ್ತವೆ ಎಂದರೆ ಸರಿ. ನಾನು ಖರೀದಿ ಹಿಡಿದ ಜಮೀನಿನಲ್ಲಿ ಗುಡಿಯನ್ನು ಕಟ್ಟಲು ಡಿಸೆಂಬರ್ 2016ರಲ್ಲಿ ಪ್ರಾರಂಭಿಸಿರುತ್ತೇನೆ. ಮೇಲೆ ಹೇಳಿದ ಎರಡು ದಾವೆಗಳು ಡಿಕ್ರಿ ಆಗಿದ್ದು ನನಗೆ ಗೊತ್ತಿತ್ತು ಎಂದರೆ ಸರಿ. ಸದರಿ ಕಾಮಗಾರಿ 2021ನೇ ಸಾಲಿನ ಆಗಸ್ಟ್ ತಿಂಗಳ ಪೂರ್ಣಗೊಂಡಿರುತ್ತದೆ. ದಿಃ 01.04.2017 ರಂದು 5ನೇ ಎದುರುದಾರರನ್ನು ಕೂಡಾ ಪಾರ್ಟಿ ಮಾಡಿ ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಾವು ಸದರಿ ಅರ್ಜಿ ಸಲ್ಲಿಸಿದ ನಂತರ ಹಾಗೇ ಕಟ್ಟಡವನ್ನು ಕಟ್ಟಲು ಮುಂದುವರೆಸಿಕೊಂಡು ಹೋಗಿರುತ್ತೇವೆ ಎಂದರೆ ಸರಿ. ನಾನು ಸಲ್ಲಿಸಿದ ಮಧ್ಯಂತರ ಅರ್ಜಿ ಆದೇಶದಲ್ಲಿ ಈ ಪ್ರಕರಣದಲ್ಲಿ ನೀವು ಬರಬೇಡಿರಿ, ಎಫ್.ಡಿ.ಪಿ. ಯಲ್ಲಿ ಎಷ್ಟು ಪಾಲು ಬರುತ್ತದೆ,

ಅಷ್ಟನ್ನು ಕಂಡುಕೊಳ್ಳಿ ಎಂದು ಆದೇಶ ಮಾಡಲಾಗಿದೆ ಎಂದರೆ ಸರಿ.

ಮೇಲೆ ಹೇಳಿದಂತೆ ನ್ಯಾಯಾಲಯ ಆದೇಶ ಮಾಡಿದ್ದರು ಕೂಡಾ, ನಾವು ಕಟ್ಟಡವನ್ನು ಹಾಗೆ ಮುಂದುವರೆಸಿಕೊಂಡು ಬಂದಿರುತ್ತೇವೆ ಎಂದರೆ, ಸಾಕ್ಷಿ ನಂಬಿಕೆ ಮೇಲೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಅದೇ ರೀತಿ ಮೇಲೆ ಹೇಳಿದ ಎರಡು ಡಿಕ್ರಿಗಳು ನನ್ನ ಮೇಲೆ ಬಂಧನಕಾರಿ ಆಗುತ್ತವೆ ಎಂದರೆ ಸರಿ. ನಾವು ಮಂದಿರ ಕಟ್ಟುವ ಉದ್ದೇಶ ಏನೆಂದರೆ ಮುಂದೆ ನ್ಯಾಯಾಲಯ ಅಲ್ಲಿ ಮಂದಿರ ಇದೆ ಬಿಟ್ಟು ಬಿಡಿರೀ ಎಂದು ಹೇಳುತ್ತದೆ, ಎಂಬ ಪೂರ್ವ ಭಾವನೆ ಮೇಲೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜನರ ಒತ್ತಾಯದ ಮೇರೆಗೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ಆದೇಶ ಧಿಕ್ಕರಿಸಿ ನ್ಯಾಯಾಲಯದವರು ಏನು ಆದೇಶ ಮಾಡುತ್ತಾರೋ ಮಾಡಲಿ ಎಂಬ ಉದ್ದೇಶದಿಂದ ಮಂದಿರ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಖರೀದಿ ಹಿಡಿದ ಜಮೀನನ್ನು ಸುಮಾರು ಅರ್ಧ ಎಕರೆ ಕಟ್ಟಡ ಮಾಡಿರುತ್ತೇವೆ. ನಾನು ಪ್ರಜ್ಞಾವಂತ ನಾಗರಿಕನಾಗಿದ್ದು ಯಾವುದೇ ಕಟ್ಟಡ ಕಟ್ಟಬೇಕಾದರೆ ಸಂಬಂಧಪಟ್ಟ ಪಂಚಾಯತಿಯಿಂದ ಕಟ್ಟಡ ಪರವಾನಿಗೆ ಅವಶ್ಯಕತೆ ಇದೆ ಎಂದರೆ, ಸಾಕ್ಷಿ ಸಮಾಧಿ ಮೇಲೆ ಕಟ್ಟಿರುತ್ತೀರಿ, ಯಾವುದೇ ನಿವೇಶನ ಹಾಕಿರುವುದಿಲ್ಲ, ಆ ಕಾರಣ ಪರವಾನಿಗೆ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಅರ್ಜಿದಾರರಿಗೆ ಹಾಗೂ ಭೀಮರಾವ್ ರವರಿಗೆ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಕೂಡಾ, ಸಮಾಧಿ ಕಟ್ಟುವ ಅವಶ್ಯಕತೆ ಅರ್ಜಿದಾರರ ಜಮೀನಿನಲ್ಲಿ ಕಟ್ಟುವ ಪ್ರಸಂಗ ಬರುವುದಿಲ್ಲ ಎಂದರೆ, ಸಾಕ್ಷಿ ಅಂದರೆ ನನ್ನ ತಂದೆ ಶಿವಬಸಯ್ಯ ರವರು ಸ್ವತಂತ್ರ ಹೋರಾಟಗಾರರು ಇದ್ದರು, ಆ ಕಾರಣ ಕಾನೂನಿ ಪ್ರಕಾರ ಅವರ ಸಮಾಧಿಯನ್ನು ಅಲ್ಲಿಯೇ ಮಾಡಲಾಗಿದೆ ಎಂದು ನುಡಿಯುತ್ತಾರೆ. ಯಾವ ಹಕ್ಕಿನಿಂದ ಸಮಾದಿಯಿಂದ ದಾವಾ ಸ್ವತ್ತಿನಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಊರ ರವರು ಎಲ್ಲರೂ ಸೇರಿ ವೀರೇಶ್ವರ ದೇವಸ್ಥಾನದ ಎದುರುಗಡೆ ಮಾಡಬೇಕೆಂದು ಒತ್ತಾಯ

ಮಾಡಿದ್ದರಿಂದ ಅಲ್ಲಿಯೇ ಮಾಡಲಾಗಿದೆ ಎಂದು ನುಡಿಯುತ್ತಾರೆ. ಕ್ರಯ ಪತ್ರದಲ್ಲಿ ಅಲ್ಲಿಯೇ ಮಾಡಬೇಕೆಂದು ಬರೆದಿದೆಯಾ ಎಂದರೆ, ಸಾಕ್ಷಿ ನನ್ನ ತಂದೆ ನಂತರ ತಿರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಮಾಧಿ ಕಟ್ಟುವ ವೇಳೆ ನ್ಯಾಯಾಲಯದ ಆದೇಶ ಪಡೆದಿರುವುದಿಲ್ಲ.

ನಾವು ಸ್ವಾಮಿಗಳು ಇದ್ದರೂ ಕೂಡಾ ಅರ್ಜಿದಾರರಿಗೆ ಮತ್ತು ಭೀಮರಾವ್ ರವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ದಾವಾ ಸ್ವತ್ತಿಗೆ ಸಂಬಂಧ ಇರುತ್ತಾರೆ ಎಂಬ ಕಾರಣದಿಂದ ನ್ಯಾಯಾಲಯ ಡಿಕ್ರಿ ಮಾಡಿದೆ ಎಂದರೆ ಇರಬಹುದು. ನಾವು ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕ್ರಯ ಪತ್ರ ಮಾಡಿಕೊಂಡು ಸುಳ್ಳು ಸಂಗತಿಗಳನ್ನು ಕ್ರಯ ಪತ್ರದಲ್ಲಿ ಸೇರಿಸಿದ್ದರಿಂದ, ನಾವು ಕಟ್ಟಿದ ಕಟ್ಟಡವನ್ನು ತೆರವುಗೊಳಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಹೆಚ್ಚಿನ ಬೆಲೆ ಉಳ್ಳ ಜಮೀನನ್ನು ಕಡಿಮೆ ಬೆಲೆಗೆ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಡಿಕೊಂಡ ಕ್ರಯ ಪತ್ರ ಮೋಸ ಉಳ್ಳದ್ದು ಆಗಿದ್ದರಿಂದ, ಸರ್ವೆ ನಂ.151ರಲ್ಲಿ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸಿ ಜಮಿನಿನಲ್ಲಿ ಎಷ್ಟು ಕಟ್ಟಡ ನಿರ್ಮಿಸಿರುತ್ತೇನೆ ಎಂದು ತೋರಿಸಲು ನಕಾಶೆ ಮುಂದೆ ಹಾಜರುಪಡಿಸಿರುತ್ತೆನೆ. ಮುಂದಿನ ಮುದ್ದತೆಗೆ ನಾನು ಹಾಜರುಪಡಿಸಿರುತ್ತೇನೆ.

(ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**